ತೆರೆದ ಅಂಚೆ

ರವರಿಗೆ,

ಇಂದ,

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರಗಳ ಇಲಾಖೆ ಅಧಿಕಾರಿ ಹಾಗೂ ನೌಕರರ ಸಂಘ (ರಿ)

ನಂ 48, 4 ನೇ ಕ್ರಾಸ್, 1ನೇ ಬ್ಲಾಕ್, ನಾಗರಬಾವಿ 2 ನೇ ಸ್ಟೇಜ್, ನಾಗರಬಾವಿ, ಬೆಂಗಳೂರು–560072

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರಗಳ ಇಲಾಖೆ ಅಧಿಕಾರಿ
ಹಾಗೂ ನೌಕರರ ಸಂಘ (ರಿ)

ನಂ 48, 4 ನೇ ಕ್ರಾಸ್, 1ನೇ ಬ್ಲಾಕ್, ನಾಗರಬಾವಿ 2 ನೇ ಸ್ಟೇಜ್, ನಾಗರಬಾವಿ, ಬೆಂಗಳೂರು–560072.

ಇದರ
ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣಾ ವೇಳಾಪಟ್ಟಿ

ಚುನಾವಣಾ ದಿನಾಂಕ: 14–03–2026 ನೇ ಶನಿವಾರ,
ಸಮಯ: ಬೆಳಿಗ್ಗೆ 11–00 ರಿಂದ ಸಂಜೆ 03–00 ಘಂಟೆಯವರೆಗೆ
ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ,
ಕಬ್ಬನ್ ಉದ್ಯಾನವನ, ಬೆಂಗಳೂರು–560001

ಮಾನ್ಯ ಸದಸ್ಯರೆ,

ಸಂಘದ ಕಾರ್ಯಕಾರಿ ಸಮಿತಿ ಚುನಾವಣೆಯನ್ನು ತಾರೀಕು: 14–03–2026 ರಂದು ಶನಿವಾರ ಬೆಳಿಗ್ಗೆ:11–00 ರಿಂದ ಸಂಜೆ 03–00 ಘಂಟೆಯವರೆಗೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನವನ, ಬೆಂಗಳೂರು–560001 ಇದರ ಆವರಣದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಚುನಾವಣಾಧಿಕಾರಿಗಳು ಈ ಬಗ್ಗೆ ಹೊರಡಿಸಿರುವ ಚುನಾವಣಾ ವೇಳಾಪಟ್ಟಿಯನ್ನು ಲಗತ್ತಿಸಿದೆ. ಮಾನ್ಯ ಗೌರವಾನ್ವಿತ ಸದಸ್ಯರೆಲ್ಲರೂ ಸಕಾಲಕ್ಕೆ ಹಾಜರಾಗಿ ಚುನಾವಣೆಯಲ್ಲಿ ಭಾಗವಹಿಸಬೇಕೆಂದು ಸವಿನಯ ಪ್ರಾರ್ಥನೆ.

ಸೂಚನೆ:– **ಇಲಾಖೆಯಿಂದ ಪಡೆದಿರುವ ಭಾವಚಿತ್ರ ವಿರುವ ಗುರುತಿನ ಚೀಟಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.**

ಸಹಿ/–

ದಿನಾಂಕ:13–02–2026
ಸ್ಥಳ: ಬೆಂಗಳೂರು

(ನಿಶ್ಚಿತ್ ವಿಕ್ಟರ್ ಡ್ಯಾನಿಯಲ್)
ಪ್ರದಾನ ಕಾರ್ಯದರ್ಶಿ

ಚುನಾವಣಾಧಿಕಾರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರಗಳ ಇಲಾಖೆ ಅಧಿಕಾರಿ ಹಾಗೂ ನೌಕರರ ಸಂಘ (ರಿ)

ನಂ 48, 4 ನೇ ಕ್ರಾಸ್, 1ನೇ ಬ್ಲಾಕ್, ನಾಗರಬಾವಿ 2 ನೇ ಸ್ಟೇಜ್, ನಾಗರಬಾವಿ, ಬೆಂಗಳೂರು–560072

ಸಂಘದ ಅಧ್ಯಕ್ಷರ ಪತ್ರ ದಿನಾಂಕ:11–02–2026 ರಲ್ಲಿ ಮೇಲ್ಕಂಡ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆಯನ್ನು ನಡೆಸಿಕೊಡಲು ಕೆ.ವಿ.ಸದಾನಂದ ಆದ ನನ್ನನ್ನು ಚುನಾವಣಾಧಿಕಾರಿಯಾಗಿ ನೇಮಿಸಿಕೊಳ್ಳಲಾಗಿದೆಯೆಂದು ತಿಳಿಸಿ, ಚುನಾವಣೆ ನಡೆಸಿಕೊಡುವಂತೆ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ಸಂಘದ ಚುನಾವಣೆ ನಡೆದ ದಿನಾಂಕದಿಂದ ಮುಂದಿನ ಮೂರು ವರ್ಷಗಳ ಅವಧಿಯ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲು ದಿನಾಂಕ:14–03–2026 ನೇ ಶನಿವಾರದಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನವನ, ಬೆಂಗಳೂರು–560001 ಇದರ ಸಭಾಂಗಣದಲ್ಲಿ ನಡೆಯಲಿರುವ ಚುನಾವಣೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಚುನಾವಣಾ ವೇಳಾ ಪಟ್ಟಿ ಹೊರಡಿಸಿರುತ್ತೇನೆ.

<u>ಚುನಾವಣಾ ವೇಳಾಪಟ್ಟಿ.</u>

ಕ್ರಮ ಸಂಖ್ಯೆ	ವಿವರಗಳು	ದಿನಾಂಕ, ವಾರ ಮತ್ತು ಸಮಯ	ವಿವರ ಮತ್ತು ಸ್ಥಳ
1	ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರುಗಳು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ ಮತ್ತು ವೇಳೆ	ದಿನಾಂಕ:–04–03–2026 ನೇ ಬುಧವಾರ ಬೆಳಿಗ್ಗೆ 11–00 ರಿಂದ ಮಧ್ಯಾಹ್ನ 03–00 ಗಂಟೆಯವರೆಗೆ	ಚುನಾವಣಾಧಿಕಾರಿ / ಚುನಾವಣಾಧಿಕಾರಿ ರವರಿಂದ ನೇಮಿಸಲ್ಪಟ್ಟ ಅಧಿಕಾರಿಗೆ ನಾಮಪತ್ರಗಳನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣ, ಕಬ್ಬನ್ ಉದ್ಯಾನವನ, ಬೆಂಗಳೂರು–560001 ಇಲ್ಲಿ ಸಲ್ಲಿಸುವುದು.
2	ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರುಗಳು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ ಮತ್ತು ವೇಳೆ	ದಿನಾಂಕ: 06–03–2026 ನೇ ಶುಕ್ರವಾರ ಬೆಳಿಗ್ಗೆ 11–00 ರಿಂದ ಮಧ್ಯಾಹ್ನ 03–00 ಗಂಟೆಯವರೆಗೆ	ಚುನಾವಣಾಧಿಕಾರಿ / ಚುನಾವಣಾಧಿಕಾರಿ ರವರಿಂದ ನೇಮಿಸಲ್ಪಟ್ಟ ಅಧಿಕಾರಿಗೆ ನಾಮಪತ್ರಗಳನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣ, ಕಬ್ಬನ್ ಉದ್ಯಾನವನ, ಬೆಂಗಳೂರು–560001 ಇಲ್ಲಿ ಸಲ್ಲಿಸುವುದು.
3	ಚುನಾವಣಾಧಿಕಾರಿ ರವರಿಂದ ನಾಮಪತ್ರಗಳ ಪರಿಶೀಲನೆ	ದಿನಾಂಕ: 07–03–2026 ನೇ ಶನಿವಾರ ಬೆಳಗ್ಗೆ 11–00 ಗಂಟೆಗೆ	ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣ, ಕಬ್ಬನ್ ಉದ್ಯಾನವನ, ಬೆಂಗಳೂರು–560001 ಇಲ್ಲಿ ಚುನಾವಣಾಧಿಕಾರಿ ರವರಿಂದ
4	ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ	ದಿನಾಂಕ:07–03–2026 ನೇ ಶನಿವಾರ ನಾಮಪತ್ರಗಳ ಪರಿಶೀಲನೆ ನಂತರ	ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣ, ಕಬ್ಬನ್ ಉದ್ಯಾನವನ, ಬೆಂಗಳೂರು–560001 ಇಲ್ಲಿ ಚುನಾವಣಾಧಿಕಾರಿ ರವರಿಂದ

––2

5	ಸ್ಪರ್ಧಿಸಿರುವ ಅಭ್ಯರ್ಥಿಗಳಿಂದ ಉಮೇದುವಾರಿಕೆಯನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ	ದಿನಾಂಕ:08–03–2026 ನೇ ಭಾನುವಾರ ಬೆಳಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 03–00 ಗಂಟೆಯವರೆಗೆ	ಚುನಾವಣಾಧಿಕಾರಿ / ಚುನಾವಣಾಧಿಕಾರಿ ರವರಿಂದ ನೇಮಿಸಲ್ಪಟ್ಟ ಅಧಿಕಾರಿಗೆ ನಾಮಪತ್ರ ವಾಪಸ್ಸಾತಿ ಸೂಚನೆಯನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣ, ಕಬ್ಬನ್ ಉದ್ಯಾನವನ, ಬೆಂಗಳೂರು–560001 ಇಲ್ಲಿ ಸಲ್ಲಿಸುವುದು.
6	ಚುನಾವಣೆಗೆ ಸ್ಪರ್ಧಿಸಿರುವ ಅರ್ಹ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ.	ದಿನಾಂಕ:08–03–2026 ನೇ ಭಾನುವಾರ ಮಧ್ಯಾಹ್ನ 03–00 ಗಂಟೆಯ ನಂತರ	ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣ, ಕಬ್ಬನ್ ಉದ್ಯಾನವನ, ಬೆಂಗಳೂರು–560001 ಇಲ್ಲಿ ಚುನಾವಣಾಧಿಕಾರಿ ರವರಿಂದ
7	ಅವಶ್ಯವಿದ್ದಲ್ಲಿ ಚುನಾವಣಾಧಿಕಾರಿ ರವರಿಂದ ಅಂತಿಮವಾಗಿ ಕಣದಲ್ಲಿ ಉಳಿದ ಉಮೇದುವಾರರ ಹೆಸರು ಮತ್ತು ಭಾವಚಿತ್ರದೊಂದಿಗೆ ಮಾದರಿ ಮತಪತ್ರ ಪ್ರಕಟಣೆ.	ದಿನಾಂಕ:10–03–2026 ನೇ ಮಂಗಳವಾರ	ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣ, ಕಬ್ಬನ್ ಉದ್ಯಾನವನ, ಬೆಂಗಳೂರು–560001 ಇಲ್ಲಿ ಚುನಾವಣಾಧಿಕಾರಿ ರವರಿಂದ
8	ಅವಶ್ಯವಿದ್ದಲ್ಲಿ ಮತದಾನದ ದಿನಾಂಕ ಮತ್ತು ಸಮಯ	ದಿನಾಂಕ:14–03–2026 ನೇ ಶನಿವಾರ ಬೆಳಿಗ್ಗೆ 11–00 ರಿಂದ ಸಂಜೆ 03–00 ಗಂಟೆಗೆ	ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನವನ, ಬೆಂಗಳೂರು–560001
9	ಅವಶ್ಯವಿದ್ದಲ್ಲಿ ಮತಗಳ ಎಣಿಕೆ ಹಾಗೂ ಚುನಾವಣೆ ಫಲಿತಾಂಶ ಪ್ರಕಟಣೆ	ದಿನಾಂಕ:14–03–2026 ನೇ ಶನಿವಾರ ಮತದಾನದ ನಂತರ	

: ಸೂಚನೆಗಳು :

1. ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರಗಳ ಇಲಾಖೆ ಅಧಿಕಾರಿ ಹಾಗೂ ನೌಕರರ ಸಂಘ (ರಿ) ಇದರ ನಿಯಮ ನಿಬಂಧನೆ ಸಂಖ್ಯೆ 6.9 ರಂತೆ ಕಾರ್ಯಕಾರಿ ಸಮಿತಿ ಗೆ ಈ ಕೆಳಕಂಡಂತೆ ಒಟ್ಟು 25 (ಇಪ್ಪತ್ತೈದು) ಸದಸ್ಯರನ್ನು ಚುನಾಯಿಸಬೇಕಾಗಿರುತ್ತದೆ.

1.	ಎ ಶ್ರೇಣಿಯ ಅಧಿಕಾರಿಗಳಿಂದ (ಈ ಪೈಕಿ ಕನಿಷ್ಠ 02 ಸ್ಥಾನವನ್ನು ಜಂಟಿ ನಿರ್ದೇಶಕರ ವೃಂದದಿಂದ ಮೇಲ್ಪಟ್ಟ ವೃಂದದವರಿಗೆ ಮೀಸಲಿಡುವುದು)	07 (ಏಳು)
2.	ಬಿ ಶ್ರೇಣಿಯ ಅಧಿಕಾರಿಗಳಿಂದ	08 (ಎಂಟು)
3.	ಸಿ ಶ್ರೇಣಿಯ ನೌಕರರುಗಳಿಂದ	09 (ಒಂಭತ್ತು)
4.	ಡಿ ಶ್ರೇಣಿಯ ನೌಕರರುಗಳಿಗೆ	01 (ಒಂದು)

2. ಸದಸ್ಯರು ತಮ್ಮ ನಾಮಪತ್ರಗಳಲ್ಲಿ ಯಾವ ಸ್ಥಾನಕ್ಕೆ ಸ್ಪರ್ಧಿಸುತ್ತೀರೆಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು

3. ನಾಮಪತ್ರ ಸಲ್ಲಿಸುವಾಗ ಚುನಾವಣಾ ಠೇವಣಿ ಬಾಬ್ತು ರೂ. 2000–00 (ರೂ. ಎರಡು ಸಾವಿರ ಮಾತ್ರ) ಗಳನ್ನು ನಗದು ಮೂಲಕ ಸಂಘಕ್ಕೆ ಪಾವತಿಸಿ ರಸೀದಿಯ ದಾಖಲಾತಿಗಳನ್ನು ನಾಮಪತ್ರದೊಂದಿಗೆ ಲಗತ್ತಿಸಿರಬೇಕು. ಚುನಾವಣಾ ಠೇವಣಿಯನ್ನು ಸಂದಾಯ ಮಾಡದೇ ಸಲ್ಲಿಸುವ ನಾಮ ಪತ್ರಗಳನ್ನು ತಿರಸ್ಕರಿಸಲಾಗುವುದು.

4. ನಾಮಪತ್ರಗಳಲ್ಲಿ ಮತದಾನಕ್ಕೆ ಅರ್ಹರಾದ ಒಬ್ಬ ಅರ್ಹ ಸದಸ್ಯರ ಸೂಚನೆಯೊಂದಿಗೆ ನಾಮಪತ್ರ ಸಲ್ಲಿಸತಕ್ಕದ್ದು.

5. ನಾಮಪತ್ರದೊಂದಿಗೆ ಇಲಾಖೆಯಂದ ಪಡೆದ ಗುರುತಿನ ಚೀಟಿಯ ಪ್ರತಿ ಲಗತ್ತಿಸುವುದು.

6. ಸಂಘದ ನಿಯಮಗಳ ಅನುಸಾರ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಬೇಕಾದಲ್ಲಿ ಅಗತ್ಯವಾಗಿ ಇರಬೇಕಾದ ಅರ್ಹತೆಗಳು ಹೊಂದಿರತಕ್ಕದ್ದು.

7. ನಾಮಪತ್ರ ಹಾಗೂ ಉಮೇದುವಾರಿಕೆ ವಾಪಸ್ಸಾತಿ ಸೂಚನೆಗಳನ್ನು ಉಮೇದುವಾರರು ಖುದ್ದು ಹಾಜರಾಗಿ ಚುನಾವಣಾಧಿಕಾರಿ / ಚುನಾವಣಾಧಿಕಾರಿಯವರಿಂದ ನೇಮಿಸಲ್ಪಟ್ಟ ಅಧಿಕಾರಿಗೆ ಸಲ್ಲಿಸುವುದು.

8. ಸಂಘದ ನಿಯಮಗಳ ಅನುಸಾರ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಬೇಕಾದಲ್ಲಿ ಯಾವುದೇ ಅನರ್ಹತೆ ಹೊಂದಿರತಕ್ಕದಲ್ಲ.

9. ಸಂಘದ ಸದಸ್ಯರು ಇಲಾಖೆಯಿಂದ ಪಡೆದಿರುವ ಭಾವಚಿತ್ರ ವಿರುವ ಗುರುತಿನ ಕಾರ್ಡ್‌ನ್ನು ಮತ ಚಲಾಯಿಸುವ ಸಮಯದಲ್ಲಿ ತಪ್ಪದೇ ಹಾಜರುಪಡಿಸಿ, ಮತದಾನದ ಚೀಟಿಯನ್ನು ಕಡ್ಡಾಯವಾಗಿ ಪಡೆದು ಮತಗಟ್ಟೆ ಅಧಿಕಾರಿಗೆ ನೀಡಬೇಕು.

10. ನಾಮಪತ್ರಗಳ ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಗಳು ಅಥವಾ ಅವರ ಸೂಚಕರು ಹಾಜರಿರಬಹುದು.

11. ನಾಮಪತ್ರ ಹಾಗೂ ಉಮೇದುವಾರಿಕೆ ವಾಪಸ್ಸಾತಿ ಸೂಚನೆಗಳನ್ನು ನಿಗಧಿತ ಸ್ಥಳದಲ್ಲಿ ಚುನಾವಣಾಧಿಕಾರಿಯಿಂದ ನೇಮಿಸಲ್ಪಟ್ಟ ಅಧಿಕಾರಿಯಿಂದ ಪಡೆಯಬಹುದು.

12. ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ಮುಗಿಯುವವರೆಗೆ ಸಾರ್ವಜನಿಕ ರಜಾ ದಿನಗಳಲ್ಲೂ ಚುನಾವಣಾ ವೇಳಾಪಟ್ಟಿಯ ಪ್ರಕಾರ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

13/02/2026

(ಕೆ. ವಿ. ಸದಾನಂದ)
ಚುನಾವಣಾಧಿಕಾರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರಗಳ
ಇಲಾಖೆ ಅಧಿಕಾರಿ ಹಾಗೂ ನೌಕರರ ಸಂಘ (ರಿ)
ಬೆಂಗಳೂರು–560 072. ಹಾಗೂ ಸಹಕಾರ ಸಂಘಗಳ
ಸಹಾಯಕ ನಿಬಂಧಕರು (ನಿ)

ಸ್ಥಳ : ಬೆಂಗಳೂರು
ದಿನಾಂಕ : 13–02–2026